**ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಮರಿತಿಬ್ಬೇಗೌಡ ಇವರು ನಿಯಮ 72 ರಡಿಯಲ್ಲಿ ಪ್ರಸ್ತಾಪಿಸಿರುವ ಸೂಚನೆ.**

**ವಿಷಯ**

ಅನುದಾನಿತ ಸಂಯುಕ್ತ ಪದವಿ ಕಾಲೇಜುಗಳಲ್ಲಿ ಕಾಲೇಜು ಶಿಕ್ಷಣ ಇಲಾಖೆಯಿಂದ ಸೇವಾ ಸಕ್ರಮಾತಿಗೊಂಡ ಸಹಾಯಕ ಪ್ರಾಧ್ಯಾಪಕರುಗಳಿಗೆ ಅವರು ಅವಿಭಜಿತ ಪದವಿ ಪೂರ್ವ ವಿಭಾಗದಲ್ಲಿ ಸಲ್ಲಿಸಿದ ಖಾಯಂ ಸೇವೆಯನ್ನು ಉನ್ನತ ಎ.ಜಿ.ಪಿ.ಗೆ ಪರಿಗಣಿಸಿ, ಸೇವಾ ಸಕ್ರಮಾತಿ ದಿನಾಂಕದಿಂದ ವೃತ್ತಿ ಪದೋನ್ನತಿಯಲ್ಲಿ ಸ್ಥಾನೀಕರಣ/ಬಡ್ತಿ ಸೌಲಭ್ಯವನ್ನು ನೀಡದೆ ಇರುವುದರಿಂದ ಉಂಟಾದ ಗಂಭೀರ ಸಮಸ್ಯೆ ಕುರಿತು.

**<u>ಉತ್ತರ</u>**

ಸರ್ಕಾರದ ಅಧಿಸೂಚನೆ ಸಂಖ್ಯೆ:ಇಡಿ/292/ಯುಪಿಸಿ/2004(1), ದಿನಾಂಕ:10.12.2004ರ ಅಧಿಸೂಚನೆಯಲ್ಲಿ ಹಾಗೂ ಸರ್ಕಾರದ ಇತರ ಅಧಿಸೂಚನೆಯಲ್ಲಿ ಖಾಸಗಿ ಅನುದಾನಿತ ಪದವಿ ಕಾಲೇಜುಗಳಲ್ಲಿ ಅರ್ಹ ಅರೆಕಾಲಿಕ ಉಪನ್ಯಾಸಕರ ಸೇವಾ ಸಕ್ರಮಾತಿಗೆ ಆದೇಶಿಸಲಾಗಿದೆ. ಅದರಂತೆ, ಕಾರ್ಯಭಾರದ ಕೊರತೆಯ ಕಾರಣ ಕೆಲವು ಉಪನ್ಯಾಸಕರುಗಳನ್ನು ಪದವಿ ಪೂರ್ವ ವಿಭಾಗಕ್ಕೆ ರಾಜ್ಯ ವೇತನ ಶ್ರೇಣಿಯಲ್ಲಿ ಸೇವಾ ಸಕ್ರಮಾತಿಗೊಳಿಸಲಾಗಿರುತ್ತದೆ. ಇವರುಗಳಿಗೆ ಯು.ಜಿ.ಸಿ. ನಿಗಧಿಪಡಿಸಿದ ವಿದ್ಯಾರ್ಹತೆಯನ್ನು ಗಳಿಸಲು ಕಾಲಾವಕಾಶ ನೀಡುವ ಬಗ್ಗೆ, ಅಥವಾ ಯು.ಜಿ.ಸಿ. ವೇತನ ಶ್ರೇಣಿಯನ್ನು ನೀಡುವ ಬಗ್ಗೆ ಅಥವಾ ಸದರಿಯವರುಗಳನ್ನು ಪದವಿ ವಿಭಾಗಕ್ಕೆ ವಾಪಸ್ಸು ಪಡೆಯುವ ಬಗ್ಗೆಯಾಗಲಿ ಯಾವುದೇ ಷರತ್ತುಗಳನ್ನು ವಿಧಿಸಿರುವುದಿಲ್ಲ.

ಸರ್ಕಾರಿ ಹಾಗೂ ಪದವಿ ಕಾಲೇಜುಗಳಲ್ಲಿ ಅರೆಕಾಲಿಕ ಉಪನ್ಯಾಸಕರುಗಳಿಗೆ ಸರ್ಕಾರದ ಆದೇಶ ಸಂಖ್ಯೆ:ಇಡಿ/37/ಯುಎನ್‌ಇ/2009, ದಿನಾಂಕ:26.12.2009ರ ಆದೇಶದಲ್ಲಿ ರಾಜ್ಯ ವೇತನ ಶ್ರೇಣಿಯಿಂದ ಯು.ಜಿ.ಸಿ. ನಿಗಧಿಪಡಿಸಿದ ವಿದ್ಯಾರ್ಹತೆಯಾದ ಎನ್.ಇ.ಟಿ./ ಎಸ್.ಎಲ್.ಇ.ಟಿ./ಪಿಹೆಚ್.ಡಿ./ಎಂ.ಫಿಲ್. ಅನ್ನು ದಿನಾಂಕ:11.07.2009ರ ಪೂರ್ವದಲ್ಲಿ ಪಡೆದವರಿಗೆ ಯು.ಜಿ.ಸಿ. ವೇತನವನ್ನು ವಿಸ್ತರಿಸಲು ಆದೇಶವಾಗಿರುತ್ತದೆ.

ಯು.ಜಿ.ಸಿ. ನಿಯಮದ ಪ್ರಕಾರ, ಪದವಿ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಬೋಧಕರಿಗೆ ಮಾತ್ರ ಯು.ಜಿ.ಸಿ. ವೇತನ ಶ್ರೇಣಿ ನೀಡಬೇಕಾಗಿರುತ್ತದೆ. ಆದರೆ, ಸರ್ಕಾರದ ಹಂತದಲ್ಲಿ ದಿನಾಂಕ:24.03.2011ರಂದು ನಡೆದ ಸಭೆಯಲ್ಲಿ ಯುಜಿಸಿಯು ಕಾಲಕಾಲಕ್ಕೆ ನಿಗದಿಪಡಿಸುವ ವಿದ್ಯಾರ್ಹತೆ ಹೊಂದಿದ್ದಲ್ಲಿ ಅದನ್ನು ಪರಿಗಣಿಸಿ ಪದವಿ ಕಾಲೇಜಿಗೆ ಹುದ್ದೆಯನ್ನು ಹಿಂಪಡೆದು ಸಕ್ರಮಾತಿ ಮಾಡಿರುವ ದಿನಾಂಕದಿಂದ ಅನ್ವಯವಾಗುವಂತೆ ಸರ್ಕಾರದ ಅಧಿಸೂಚನೆ ಸಂಖ್ಯೆ:ಇಡಿ/56/ಯುಪಿಸಿ/1997, ದಿನಾಂಕ:12.02.2004 ರಲ್ಲಿ ಹಾಗೂ ಯುಜಿಸಿ ಮಾರ್ಗಸೂಚಿಗಳನ್ವಯ ಅರ್ಹತೆ ಹೊಂದಿರುವವರಿಗೆ ಯುಜಿಸಿ ವೇತನ ಶ್ರೇಣಿಯನ್ನು ವಿಸ್ತರಿಸುವುದು. ಯುಜಿಸಿ ವಿದ್ಯಾರ್ಹತೆ ಹೊಂದಿರದ ಉಪನ್ಯಾಸಕರುಗಳಿಗೆ ರಾಜ್ಯ ವೇತನ ಶ್ರೇಣಿ ಮುಂದುವರೆಸುವುದೆಂದು ತೀರ್ಮಾನವಾಗಿರುತ್ತದೆ.

....2.

ಅದರಂತೆ, ಪದವಿ ಕಾಲೇಜುಗಳಿಗೆ ಹುದ್ದೆ ಹಿಂಪಡೆಯುವುದರಿಂದ ಹೆಚ್ಚುವರಿ ಉಪನ್ಯಾಸಕರ ಪರಿಸ್ಥಿತಿ ಉದ್ಭವಿಸುವುದರಿಂದ ಅಂತಹ ಉಪನ್ಯಾಸಕರುಗಳು ತಾತ್ಕಾಲಿಕವಾಗಿ ಮೊದಲಿಗೆ ಖಾಲಿ ಹುದ್ದೆಯಿರುವ ಇತರೇ ಆಡಳಿತ ಮಂಡಳಿಯ ಖಾಸಗಿ ಅನುದಾನಿತ ಕಾಲೇಜುಗಳಿಗೆ ನಂತರದಲ್ಲಿ ಸರ್ಕಾರಿ ಕಾಲೇಜುಗಳಲ್ಲಿ ಖಾಲಿ ಹುದ್ದೆಗೆ ಎದುರಾಗಿ ಮರುಹಂಚಿಕೆ (Redeployment) ಮಾಡಲಾಗಿರುತ್ತದೆ.

ಮುಂದುವರೆದು, ಸದರಿ ಸಕ್ರಮಾತಿಗೊಂಡ ಉಪನ್ಯಾಸಕರುಗಳಿಗೆ ಅವರುಗಳು ಪದವಿ ಪೂರ್ವ ವಿಭಾಗದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಯು.ಜಿ.ಸಿ. ವೇತನಕ್ಕೆ ಅರ್ಹತೆ ಪಡೆದಿರುವ ದಿನಾಂಕದಿಂದ 06 ವರ್ಷಕ್ಕೆ ಎ.ಜಿ.ಪಿ. ನೀಡಬಹುದೇ ಅಥವಾ ಪದವಿ ಕಾಲೇಜಿಗೆ ಮರು ಹಂಚಿಕೆ ಆದ ದಿನಾಂಕದಿಂದ 06 ವರ್ಷಕ್ಕೆ ಎ.ಜಿ.ಪಿ. ನೀಡಬಹುದೇ ಎಂಬ ಬಗ್ಗೆ ಆಯುಕ್ತರ ದಿನಾಂಕ:28.10.2019ರ ಪ್ರಸ್ತಾವನೆಯನ್ನು ಪರಿಶೀಲಿಸಿ, ಸರ್ಕಾರದ ಪತ್ರ ಸಂಖ್ಯೆ:ಇಡಿ/169/ಯುಪಿಸಿ/2019(ಇ), ದಿನಾಂಕ:30.08.2021ರಲ್ಲಿ ಕರ್ನಾಟಕ ಶಿಕ್ಷಣ ಸಂಸ್ಥೆಗಳು (ಆರೆಕಾಲಿಕ ಖಾಸಗಿ ಉಪನ್ಯಾಸಕರನ್ನು ಖಾಸಗಿ ಅನುದಾನಿತ ಪದವಿ ಕಾಲೇಜುಗಳಲ್ಲಿ ವಿಲೀನಗೊಳಿಸುವಿಕೆ) (ವಿಶೇಷ) ನಿಯಮಗಳು-2003 ರನ್ವಯ ಒಟ್ಟಾರೆ ರಾಜ್ಯದಲ್ಲಿ ಎಷ್ಟು ಜನ ಸಹಾಯಕ ಪ್ರಾಧ್ಯಾಪಕರನ್ನು ಪದವಿ ಕಾಲೇಜುಗಳಲ್ಲಿ ವಿಲೀನಗೊಳಿಸಲಾಯಿತು. ಕಾರ್ಯಭಾರದ ಕೊರತೆಯ ಕಾರಣಕ್ಕಾಗಿ ಎಷ್ಟು ಜನ ಸಹಾಯಕ ಪ್ರಾಧ್ಯಾಪಕರನ್ನು ಅವಿಭಜಿತ ಪದವಿ ಪೂರ್ವ ಕಾಲೇಜುಗಳಲ್ಲಿ ವಿಲೀನಗೊಳಿಸಲಾಯಿತು (ಕಾಲೇಜುವಾರು ಮತ್ತು ವಲಯವಾರು ಮಾಹಿತಿ ನೀಡುವುದು) ಎಂಬ ಅಂಶಗಳಿಗೆ ಮಾಹಿತಿ ಒದಗಿಸುವಂತೆ ಆಯುಕ್ತರನ್ನು ಕೋರಲಾಗಿರುತ್ತದೆ. ಸದರಿ ಮಾಹಿತಿ ಸ್ವೀಕೃತವಾದ ನಂತರ ಪ್ರಸ್ತಾವನೆಯನ್ನು ಪರಿಶೀಲಿಸಲಾಗುವುದು.

ಇಡಿ 122 ಯುಪಿಸಿ 2021

**(ಡಾ: ಅಶ್ವಥ್ ನಾರಾಯಣ ಸಿ.ಎನ್.)**
ಉನ್ನತ ಶಿಕ್ಷಣ ಸಚಿವರು